**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 1182/2019**

**ಪಿಡಬ್ಲೂ-8**

**ಸಿಡಬ್ಲೂ-6**

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಧ ಮಣಿ |
| ತಂದೆಯ ಹೆಸರು | - | ಚಂದ್ರೇಗೌಡ |
| ವಯಸ್ಸು | - | 35 ವರ್ಷ |
| ಕೆಲಸ | - | ಶಾಲೆಯ ಆಡುಗೆದಾರರು |
| ವಾಸ | - | ದೊಡ್ಡೆಕೊಪ್ಪಲು |

**ದಿನಾಂಕ 22-12-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ನಾನು ದೊಡ್ಡೆಕೊಪ್ಪಲು ಹೈಸ್ಕೂಲ್‌ನಲ್ಲಿ ಸುಮಾರು 10 ವರ್ಷದಿಂದ ಮುಖ್ಯ ಆಡುಗೆದಾರಳಾಗಿ ಕೆಲಸ ಮಾಡುತ್ತಿದ್ದೇನೆ. ದಿಃ 19.07.2014 ರಂದು ಶಾಲೆಯಲ್ಲಿ ಕೆಲಸ ಮುಗಿಸಿಕೊಂಡು ಸುಮಾರು ಮದ್ಯಾಹ್ನ 2.30 -3 ಗಂಟೆ ಸಮಯದಲ್ಲಿ ಕಛೇರಿಗೆ ಹಾಗೂ ಆಡುಗೆ ಮನೆಗೆ ಬೀಗ ಹಾಕಿಕೊಂಡು ಹೋದೇವು. ಮಾರನೆಯ ದಿನ ಬೆಳಗ್ಗೆ 9.30 ಸಮಯಕ್ಕೆ ಶಾಲೆಗೆ ಬಂದು ನೋಡಲಾಗಿ ಆಡುಗೆ ಮನೆಯ ಬೀಗ ಹೊಡೆದು ಆಡುಗೆಮನೆಯಲ್ಲಿದ್ದ ಸಿಲಿಂಡರ್ ಹಾಗೂ ಆಡುಗೆ ಸಮಾನುಗಳನ್ನು ಯಾರು ತೆಗೆದುಕೊಂಡು ಹೋಗಿರುವುದು ಕಂಡು ಬಂತು. ಆಗ ಚಾಸಾ 1 ರವರು ಮುಖ್ಯ ಶಿಕ್ಷಕರರಾಗಿದ್ದರು. ಸದರಿ ಸಿಲಿಂಡರ್ ನ್ನು ಮಕ್ಕಳ ಆಹಾರ ತಯಾರಿಕೆ ಉಪಯೋಗಿಸುತಿದ್ದರು. ಸಾಕ್ಷಿಯು ನಿಪಿ 3 ರಲ್ಲಿರುವ ಸಿಲಿಂಡರನ್ನು ನೋಡಿ ಗುರುತಿಸಿರುತ್ತಾರೆ. ಯಾರೊ ಕಳ್ಳತನ ಮಾಡಿರುವುದು ಕಂಡು ಬಂತು. ಆದ್ದರಿಂದ ಚಾಸಾ 1 ಪೊಲೀಸರಿಗೆ ದೂರು ನೀಡಿರುತ್ತಾರೆ.

**<u>ಪಾಟೀ ಸವಾಲು ಶ್ರೀ ಎಮ್ ಸಿ ಎಸ್    ವಕೀಲರಿಂದಃ</u>**

ನಮ್ಮ ಶಾಲೆಯ ಅಡುಗೆಮನೆಯಲ್ಲಿ ಸಿಲಿಂಡರ್, ರೇಷನ್ ಸಮಾನು ಮತ್ತು ಅಡುಗೆಗೆ ಉಪಯೋಗಿಸುವ ಸಾಮಾನುಗಳು ಇದ್ದವು. ಸುಮಾರು 10,000 ರೂಪಾಯಿ ಸಾಮಾನುಗಳು ಇದ್ದವು. ಸದರಿ ಸಾಮಾನುಗಳು ಕಳ್ಳತನ ಆಗಿರಲಿಲ್ಲ. ಬೀಗ ಅಲ್ಲೆ ನೇತಾಡುತಿತ್ತ ಎಂಬ ಪ್ರಶ್ನೆಗೆ  ಡೋರ್ ಲಾಕ್  ಮಾಡಿಸಿದ್ದೇವು ಅದನ್ನು ಹಾರೆಯಲ್ಲಿ ಮೀಟಿದ್ದರು ಎಂದು ಸಾಕ್ಷಿಯು ನುಡಿಯುತ್ತಾರೆ.   ಇದೇ   ಮೊದಲನೇ   ಭಾರಿಗೆ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಹೇಳುತ್ತಿದ್ದೇನೆ. ನಿಪಿ 3 ರಲ್ಲಿರುವ ಸಿಲಿಂಡರ್ ನಮ್ಮದೇ ಎಂದು ಹೇಳಲು ಅದರ ಕಸ್ಟಮರ್ ಅಥವಾ ವಿಶೇಷ ಗುರುತಿನ ಸಂಖ್ಯೆ ಗೊತ್ತಿಲ್ಲ.

ಚಾಸಾ 1 ರವರ ನಿರ್ದೇಶನದ ಮೇರೆಗೆ ನಾನು ಶಾಲೆಯಲ್ಲಿ ಎಲ್ಲಾ ಕೆಲಸ ಮಾಡುತ್ತಿದ್ದೆ. ಚಾಸಾ 1 ರವರ ಹೇಳಿಕೆ ಮೇರೆಗೆ ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಿಂಗಳಿನಲ್ಲಿ ಎಷ್ಟು ಅಡುಗೆ ಸಾಮಾನು ಬರುತ್ತದೆ ಎಂದು ನನ್ನ ಬಳಿ ಪಟ್ಟಿ ಇರುತ್ತದೆ ಎಂದರೆ ಸರಿ.  ಒಂದು ದಿನಕ್ಕೆ  ಎಷ್ಟು ಅಡುಗೆ ಪದಾರ್ಥಗಳನ್ನು  ಬಳಸುತ್ತೇವೆ ಹಾಗೂ ಎಷ್ಟು ಪದಾರ್ಥಗಳನ್ನು ಪಡೆದಿರುತ್ತೇವೆ  ಎಂದು ಇಂಡೆಂಟ್ ನಲ್ಲಿ ಬರೆದಿರುತ್ತೇವೆ ಎಂದರೆ ಸರಿ.  ಆ ದಿನ ನಮ್ಮ ಶಾಲೆಯಿಂದ ಯಾವುದೇ ಸಿಲಿಂಡರ್ ಅಥವಾ ಆಹಾರ ಪದಾರ್ಥಗಳು ಕಳ್ಳತನವಾಗಿರುವುದಿಲ್ಲ ಅವುಗಳನ್ನು ನಾವೇ ದುರುಪಯೋಗ ಪಡಿಸಿಕೊಂಡು ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ಚಾಸಾ 1 ಹಾಗೂ ಪೊಲೀಸರ ಮಾತು ಕೇಳಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> – ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ